**ಓ ಎಸ್ 145/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 12.11.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 3, ಮತ್ತು 5 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಎಂ ಕೆ ಸಿ ವಕೀಲರಿಂದಃ**

ನಾನು ಅವಿದ್ಯಾವಂತ. ನನ್ನ ತಾತನ ಹೆಸರು ತಿರುಮಲೇಗೌಡ. ನನ್ನ ಅಜ್ಜಿಯ ಹೆಸರು ಗೊತ್ತಿಲ್ಲ. ನನ್ನ ತಾತನಿಗೆ 4 ಜನ ಮಕ್ಕಳು. ಅವರುಗಳೆಂದರೆ, ತಿರುಮಲೇಗೌಡ, ನೀಲೇಗೌಡ, ಸಣ್ಣತಾಯಮ್ಮ, ತಾಯಮ್ಮ. ನಮ್ಮ ತಾಯಿ ಹೆಸರು ನಿಂಗಮ್ಮ. ನಮ್ಮ ತಂದೆಯನ್ನು ನಮ್ಮ ತಾಯಿಯ ತಾಯಿಯಾದ ಪಾಪಮ್ಮ ರವರು ದತ್ತು ತೆಗೆದುಕೊಂಡಿದ್ದರು. ದತ್ತು ತೆಗೆದುಕೊಂಡ ಬಗ್ಗೆ ದಾಖಲೆ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಅಜ್ಜಿ ಪಾಪಮ್ಮರವರ ಊರು ಯರೇಗೌಡನಹಳ್ಳಿ. ನಮ್ಮ ತಂದೆಗೆ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿಲ್ಲ. ನಮ್ಮ ಅಜ್ಜಿ ಪಾಪಮ್ಮರವರ ಆಸ್ತಿಯು ನಮ್ಮ ತಂದೆಗೆ ಬಂದಿತ್ತು. ಈ ಸಂಗತಿಗಳನ್ನು ದಾವಾ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

ನನ್ನ ತಂದೆ ತಿರುಮಲೇಗೌಡರಿಗೆ 5 ಜನ ಮಕ್ಕಳು. ಮೊದಲನೇಯವರು ತಿಮ್ಮಮ್ಮ, 2 ನೇಯವರು ನಾನು, 3 ನೇ ಯವರು ಸಣ್ಣೇಗೌಡ, 4 ನೇಯವರು ಗೋವಿಂದೇಗೌಡ, 5 ನೇಯವರು ವೆಂಕಟೇಶ ಎಂದರೆ ಸರಿ. ವೆಂಕಟೇಶ ತೀರಿಕೊಂಡಿದ್ದಾರೆ ಎಂದರೆ ಸರಿ.

ನನ್ನ ತಂದೆ ಹಾಗೂ ನಾವೆಲ್ಲರೂ ಜಿ ಶೆಟ್ಟಹಳ್ಳಿಯಲ್ಲಿ ವಾಸವಿದ್ದೆವು ಎಂದರೆ ಸರಿ. ನಾನು ಹಾಗೂ ನನ್ನ ಅಕ್ಕ ಮತ್ತು ತಮ್ಮಂದಿರು 1991 ರಿಂದಲೂ ಬೇರೆ ಬೇರೆ ವಾಸವಿದ್ದೇವೆ ಎಂದರೆ ಈಗ 10 ವರ್ಷಗಳಿಂದ ಇಚೆಗೆ ಬೇರೆ ಬೇರೆ ವಾಸ ಇದ್ದೇವೆ.

ದಾವಾ ಷೆಡ್ಯೂಲ್ ಐಟಂ ನಂ. 1 ರಿಂದ 8 ರಲ್ಲಿನ ಸ್ವತ್ತುಗಳನ್ನು ನಾವೆಲ್ಲರೂ 1991 ರಲ್ಲಿ ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವುದೇ

ಜಮೀನನ್ನು ಪ್ರತ್ಯೇಕವಾಗಿ ಮಾಡುತ್ತಿಲ್ಲ. ದಾವಾ ಆಸ್ತಿ ಐಟಂ ನಂ. 1 ರಿಂದ 8 ನಮ್ಮ ತಾಯಿ ನಿಂಗಮ್ಮ ಹಾಗೂ ತಂದೆ ತಿರುಮಲೇಗೌಡರ ಹೆಸರಿನಲ್ಲಿ ಮುಂದುವರಿದುಕೊಂಡು ಬಂದಿವೆ ಎಂದರೆ ಸರಿ.

ಜಿ ಶೆಟ್ಟಹಳ್ಳಿ ಗ್ರಾಮದ ಸರ್ವೆ ನಂ. 21 ರ ಒಟ್ಟು ವಿಸ್ತೀರ್ಣ 45 ಎಕರೆ ಇದೆ ಎಂದರೆ ಸರಿ. ಆ ಆಸ್ತಿಯನ್ನು ನಮ್ಮ ತಂದೆಯೂ ಸೇರಿದಂತೆ ನಮ್ಮ ಗ್ರಾಮದ ಸುಮಾರು 25 ರಿಂದ 30 ಜನ ಅನುಭವಿಸುತ್ತಿದ್ದರು ಎಂದರೆ ಸರಿ. ಅದೇ ಜಮೀನಿನಲ್ಲಿ ಸಣ್ಣೇಗೌಡ, ಗೋವಿಂದೇಗೌಡ ಮತ್ತು ವೆಂಕಟೇಶ ಸಹ ಅನುಭವ ಹೊಂದಿದ್ದಾರೆ ಎಂದರೆ ಸರಿ. ಆ ಜಮೀನಿನ ಪೈಕಿ 0.13 ಗುಂಟೆ ವಿಸ್ತೀರ್ಣದಲ್ಲಿ ನಾನು ಅನುಭವ ಹೊಂದಿದ್ದೇನೆ ಎಂದರೆ ಸರಿಯಲ್ಲ. ನಾನು ಅನುಭವದಲ್ಲಿರುವ ಸ್ವತ್ತಿನ ಪಶ್ಚಿಮಕ್ಕೆ ಸಣ್ಣೇಗೌಡರು 0.12 ಗುಂಟೆ ವಿಸ್ತೀರ್ಣದಲ್ಲಿ ಅನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅವರ ಪಶ್ಚಿಮಕ್ಕೆ ಗೋವಿಂದೇಗೌಡರು 0.12 ಗುಂಟೆ ವಿಸ್ತೀರ್ಣದಲ್ಲಿ ಅನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅವರ ಪಶ್ಚಿಮಕ್ಕೆ ವೆಂಕಟೇಶರವರ ಹೆಂಡತಿ ಸಾಕಮ್ಮ ಅಂದರೆ 5 ನೇ ಪ್ರತಿವಾದಿಯು 0.12 ಗುಂಟೆ ವಿಸ್ತೀರ್ಣದಲ್ಲಿ ಅನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಅವರೆಲ್ಲರೂ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ, ದರಖಾಸ್ತು ಭೂಮಿ ಪಾಳು ಬಿದ್ದಿದೆ. ಗೋವಿಂದೇಗೌಡರು ಸರ್ವೆ ನಂ. 21 ರಲ್ಲಿ ಆರ್ ಸಿ ಸಿ ಮನೆ ಹಾಗೂ ದನದ ಕೊಟ್ಟಿಗೆ ಕಟ್ಟಿಕೊಂಡಿದ್ದಾರೆ ಎಂದರೆ ನಮ್ಮ ತಂದೆ ಬದುಕಿದ್ದಾಗಲೇ ಅದೇ ಸರ್ವೆ ನಂಬರಿನಲ್ಲಿ ಬೇರೆ ಕಡೆ ಕಟ್ಟಿಕೊಂಡಿದ್ದಾರೆ. ಸರ್ಕಾರಿ ಭೂಮಿಯಲ್ಲಿ ಕಟ್ಟಿದ್ದ ಮನೆಯನ್ನು ಸಕ್ರಮಗೊಳಿಸುವಂತೆ ಗೋವಿಂದೇಗೌಡರು ಮಾಣಿಕ್ಯನಹಳ್ಳಿ ಗ್ರಾಮ ಪಂಚಾಯಿತಿಗೆ ನೀಡಿದ್ದ ಅರ್ಜಿಯ ಆಧಾರದ ಮೇಲೆ ಅವರ ಹೆಸರಿಗೆ ಆ ಮನೆ ಖಾತಾ ಆಗಿದೆ ಎಂದರೆ ಸರಿಯಲ್ಲ. ಗೋವಿಂದೇಗೌಡರು ಈಗ ಮಾಡಿಸಿಕೊಂಡಿದ್ದಾರೆ. ಆ ಮನೆಯಲ್ಲಿ ಈಗ ಗೋವಿಂದೇಗೌಡರು ಮತ್ತು ಅವರ ಹೆಂಡತಿ  ಮಕ್ಕಳು ವಾಸ

ಇದ್ದಾರೆ ಎಂದರೆ ಸರಿ. ಆ ಮನೆಯೇ ದಾವಾ ಷೆಡ್ಯೂಲ್ ಐಟಂ ನಂ. 13 ಎಂದರೆ ಸರಿ. ಗೋವಿಂದೇಗೌಡರು ದಿನಾಂಕ 10.12.2023 ರಲ್ಲಿ ಮನೆ ಕಟ್ಟಿ ಗೃಹ ಪ್ರವೇಶ ಮಾಡಿದ್ದಾರೆ ಎಂದರೆ ನಮ್ಮ ತಂದೆ ಕಟ್ಟಿದ್ದ ಮನೆಯ ಮುಂದಿನ ಭಾಗದಲ್ಲಿ ಗೋವಿಂದೇಗೌಡರು ಮನೆ ಕಟ್ಟಿ ಗೃಹ ಪ್ರವೇಶ ಮಾಡಿದ್ದಾರೆ. ಸರ್ಕಾರಿ ಜಮೀನಿನಲ್ಲಿ ಗೋವಿಂದೇಗೌಡರು ಕಟ್ಟಿರುವ ಮನೆಯಲ್ಲಿ ನಮಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 21 ರಲ್ಲಿ 1991 ಕ್ಕಿಂತ ಮೊದಲಿನಿಂದಲೂ ನಮ್ಮ ತಂದೆ ಮತ್ತು ನಾವು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಯ ಹೆಸರಿನಲ್ಲಿ ಸುಮಾರು 6 ಎಕರೆ ಜಮೀನು ಇದ್ದ ಕಾರಣ ಸರ್ಕಾರವು ಅವರಿಗೆ ಜಮೀನನ್ನು ಮಂಜೂರು ಮಾಡಲು ಬರದ ಕಾರಣ ನಮ್ಮ ತಂದೆಯು ನನ್ನ ಹೆಸರಿನಲ್ಲಿ ಮಂಜೂರಾತಿಗೆ ಅರ್ಜಿ ಹಾಕಿಸಿದ್ದರು ಎಂದರೆ ನಾನೇ ಅರ್ಜಿ ಹಾಕಿದೆ. ಅರ್ಜಿ ಹಾಕಿದ ನಂತರ ಸದರಿ ಸರ್ವೆ ನಂಬರಿನಲ್ಲಿ 1 ಎಕರೆ 0.09 ಗುಂಟೆಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಸಾಗುವಳಿ ಚೀಟಿ ನೀಡಿದ್ದಾರೆ ಎಂದರೆ ಸರಿ. ಈ ಸ್ವತ್ತು ದಾವಾ ಷೆಡ್ಯೂಲ್ ಐಟಂ ನಂ. 10 ಆಗಿದೆ ಎಂದರೆ ಸರಿ. ಸದರಿ 1 ಎಕರೆ 0.09 ಗುಂಟೆ ಜಮೀನನ್ನು ನಾವು 4 ಜನ ಗಂಡು ಮಕ್ಕಳೂ ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ಸ್ವತ್ತನ್ನು ದುರಸ್ತು ಮಾಡಿಸಲು ನಾವು ಅರ್ಜಿ ಕೊಟ್ಟಿದ್ದೇವೆ ಎಂದರೆ ನಾನು ಮಾತ್ರ ಅರ್ಜಿ ಕೊಟ್ಟಿದ್ದೇನೆ. ಅವರಿಂದ ತಲಾ ರೂ.4,500/- ಹಣವನ್ನು ದುರಸ್ತು ಶುಲ್ಕವಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನ ಸುದೇಶ ಎಲ್ಲಾ ಸೇರಿಕೊಂಡು ಮಾತುಕತೆ ಮಾಡಿ ನಾನೇ ಮುಂದೆ ನಿಂತು ದುರಸ್ತು ಮಾಡಿಸುವಂತೆ ನಿರ್ಧಾರ ಆಗಿ ಎಲ್ಲರಿಂದಲೂ ಹಣ ತೆಗೆದುಕೊಂಡು ಖರ್ಚು ವೆಚ್ಚ ಭರಿಸುವಂತೆ ಮಾತುಕತೆಯಾಗಿದೆ ಎಂದರೆ ಸರಿಯಲ್ಲ. ಈ ಕಾರಣದಿಂದಲೇ ಈ ದಾವೆಯನ್ನು ಮಧ್ಯಸ್ಥಿಕಾ ಕೇಂದ್ರಕ್ಕೆ ಕಳುಹಿಸಲು ಒಪ್ಪಲಾಯಿತು ಎಂದರೆ ಸರಿ.

ಶೆಟ್ಟಹಳ್ಳಿ ಗ್ರಾಮದ ಸರ್ವೆ ನಂ. 9 ರಲ್ಲಿ 20 ಎಕರೆ 0.21 ಗುಂಟೆ ಸರ್ಕಾರಿ ಗೋಮಾಳ ಇದೆ ಎಂದರೆ ಸರಿ. ಆ ಸ್ವತ್ತು ದಾವಾ ಷೆಡ್ಯೂಲ್ ಐಟಂ ನಂ. 9 ಆಗಿದೆ ಎಂದರೆ ಸರಿ.  ಈ ಜಮೀನಿನಲ್ಲಿ ಗೋವಿಂದೇಗೌಡರು ಸೇರಿದಂತೆ ನಮ್ಮ ಗ್ರಾಮದ ಇತರೆ 10–12 ಜನಕ್ಕೆ ಜಾಗ ಮಂಜೂರಾಗಿದೆ ಎಂದರೆ ಸರಿ. ಗೋವಿಂದೇಗೌಡರಿಗೆ ಸರ್ವೆ ನಂ, 9 ರಲ್ಲಿ 2 ಎಕರೆಗೆ ಸಾಗುವಳಿ ಚೀಟಿ ನೀಡಿದ್ದು  1 ಎಕರೆ 0.39 ಗುಂಟೆಗೆ ಅವರ ಹೆಸರಿನಲ್ಲಿ ಆರ್ ಟಿ ಸಿ ಬಂದಿದೆ ಎಂದರೆ ಸರಿ. ಆ ಜಮೀನಿಗೆ ಸಂಬಂಧಿಸಿದ ಎಲ್ಲಾ ಕಂದಾಯ ದಾಖಲಾತಿಗಳು ಗೋವಿಂದೇಗೌಡರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿ.  ಆ ಜಮೀನನ್ನೂ ಗೋವಿಂದೇಗೌಡರಿಗೆ ದಿನಾಂಕ 23.09.1994 ರಲ್ಲಿ ಮಂಜೂರು ಮಾಡಿದ್ದಾರೆ ಎಂದರೆ ಸರಿ.  ಮಂಜೂರಾದಾಗಿನಿಂದಲೂ ಆ ಸ್ವತ್ತಿನಲ್ಲಿ ಗೋವಿಂದೇಗೌಡರೇ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ನಾವೂ 4 ಜನ ಸ್ವಾಧೀನಾನುಭವ ಹೊಂದಿದ್ದೇವೆ.  ಆ ಜಮೀನಿಗೆ ಸಂಬಂಧಿಸಿದ ಕಿಮ್ಮತ್ತಿನ ಹಣವನ್ನು ಗೋವಿಂದೇಗೌಡರೇ ಕಟ್ಟಿದ್ದಾರೆ ಎಂದರೆ ಸರಿಯಲ್ಲ, ನಾವೂ 4 ಜನ ಕಟ್ಟಿದ್ದೇವೆ. ನಾವು 4 ಜನರು  ಕಿಮ್ಮತ್ತು ಕಟ್ಟಿರುವ ಬಗ್ಗೆ ದಾಖಲೆ ಇಲ್ಲ. 1991 ರಲ್ಲಿ ನಾವು ವಿಭಾಗ ಆದ ನಂತರ ಆ ಜಮೀನು ಗೋವಿಂದೇಗೌಡರಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಮರಣ ಹೊಂದಿ ಸುಮಾರು 10–15 ವರ್ಷಗಳಾಗಿವೆ.  ಅವರು ಸಾಯುವ ಸಮಯದಲ್ಲಿ ವೆಂಕಟೇಶರವರ ಮನೆಯಲ್ಲಿ ವಾಸ ಇದ್ದರು.  ಮೊದಲು ನನ್ನ ತಂದೆ ಮರಣ ಹೊಂದಿದರು, ಅನಂತರ ವೆಂಕಟೇಶ ಮರಣ ಹೊಂದಿದರು. ನನ್ನ ತಾಯಿ ನಿಂಗಮ್ಮರವರು ನಮ್ಮ 4 ಜನರ ಬಳಿ ಆರಾರು ತಿಂಗಳು ವಾಸ ಇದ್ದರು, ಸುಮಾರು 3 ವರ್ಷಗಳ ಕಾಲ ಹಾಗೆ ಇದ್ದರು. ನಮ್ಮ ತಾಯಿ ಈಗ ಒಂದು ವರ್ಷದ ಹಿಂದೆ ಮರಣ ಹೊಂದಿದರು. ಕುಟುಂಬದ ಯಜಮಾನಿಕೆಯನ್ನು ನನ್ನ ತಂದೆ ಮಾಡುತ್ತಿದ್ದರು.  ನಮ್ಮ ತಂದೆ ತೀರಿಕೊಂಡ ನಂತರ ನಾವು 4 ಜನ ಗಂಡು ಮಕ್ಕಳು

ಬೇರೆ ಬೇರೆ ವಾಸ ಮಾಡಿಕೊಂಡು ನಮ್ಮ ನಮ್ಮ ವ್ಯವಹಾರಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡೆವು. ನಮ್ಮ ತಂದೆ ತೀರಿಕೊಂಡ ನಂತರವೂ ಸಹ ಜಮೀನಿನುಗಳಲ್ಲಿ ವ್ಯವಸಾಯವನ್ನು ಗೋವಿಂದೇಗೌಡ, ಸಣ್ಣೇಗೌಡ ಹಾಗೂ ವೆಂಕಟೇಶ ಒಟ್ಟಿಗೆ ಮಾಡಿಕೊಂಡು ಬರುತ್ತಿದ್ದಾರೆ. ನಾನು ಮಾಲೂರಿನಲ್ಲಿ ಸುಮಾರು 10 ವರ್ಷಗಳ ಕಾಲ ಇದ್ದೆ. ಈಗ 2 ವರ್ಷಗಳಿಂದ ಊರಿನಲ್ಲಿ ಇದ್ದೇನೆ. ನನ್ನ ಭಾಗದ ಜಮೀನನ್ನು ಸಹ ಗೋವಿಂದೇಗೌಡ, ಸಣ್ಣೇಗೌಡ ಹಾಗೂ ವೆಂಕಟೇಶ ಒಟ್ಟಿಗೆ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ತಂದೆ ಸಾಯುವ ಪೂರ್ವದಲ್ಲಿ ವೆಂಕಟೇಶರವರ ಜೊತೆಯಲ್ಲಿ ಸುಮಾರು 5 ವರ್ಷ ಇದ್ದರು.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**